**ಮೂ.ದಾ.ನಂ. 38/2016**

ಪಿ.ಡಬ್ಲ್ಯು 1

(ಇಂದು ದಿನಾಂಕ: **02-12-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಶ್ರೀ. ಎಮ್.ಎನ್.ಎಸ್. ವಕೀಲರಿಂದಃ**

ವಾದಿ ಹಾಗೂ ಅವರ ಮಕ್ಕಳು ನನ್ನ ವಿರುದ್ಧ ಏನು ಪರಿಹಾರವನ್ನು ಕೋರಿ ದಾವೆಯನ್ನು ಮಾಡಿದ್ದಾರೆ ಎಂಬ ಬಗ್ಗೆ ನನಗೆ ತಿಳಿದಿಲ್ಲ. ಈ ದಾವೆಯಲ್ಲಿ ವಾದಿಯರು ಯಾವ ಆಸ್ತಿಯನ್ನು ದಾವಾ ಆಸ್ತಿಯಾಗಿ ತೋರಿಸಿದ್ದಾರೆ ಎಂಬ ಬಗ್ಗೆ ತಿಳಿದಿದೆ. ರಾಮಾ ಸುಬ್ರಾಯ ನಾಯ್ಕ ಇವರ ಗಜನಿ ಆಸ್ತಿಯನ್ನು ಈ ದಾವೆಯಲ್ಲಿ ದಾವಾಸ್ತಿಯಾಗಿ ಸೇರಿಸಿದ್ದಾರೆ. ಸದ್ರಿ ಆಸ್ತಿಗಳು ಬಾಡ ಹಾಗೂ ಗುಡೇ ಅಂಗಡಿ ಗ್ರಾಮದಲ್ಲಿ ಇದೆ. ಸದ್ರಿ ಗ್ರಾಮದಲ್ಲಿ ಸುಮಾರು ಸರ್ವೆ ನಂಬರಗಳು ಇದ್ದು, ನನಗೆ ಕೇವಲ ಎರಡು ಸರ್ವೆ ನಂಬರಗಳು ತಿಳಿದಿವೆ. ನನಗೆ ತಿಳಿದಿರುವ ಸರ್ವೆ ನಂಬರಗಳು 71 ಹಾಗೂ 73 ಆಗಿರುತ್ತವೆ. ಸದ್ರಿ ದಾವಾಸ್ತಿ ರಾಮಾ ಸುಬ್ರಾಯ ನಾಯ್ಕ ಇವರಿಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ. ದಾವಾಸ್ತಿಯು ರಾಮಾ ಸುಬ್ರಾಯ ನಾಯ್ಕ ಇವರಿಗೆ ಪಿತ್ರಾರ್ಜಿತವಾಗಿ ಬಂದಿರುವ ಬಗ್ಗೆ ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿರುವ ಬಗ್ಗೆ ನನಗೆ ತಿಳಿದಿಲ್ಲ.

ನನ್ನ ಪ್ರತಿವಾದ ಪತ್ರವನ್ನು ಶ್ರೀನಿವಾಸ ವಕೀಲರ ಮುಖಾಂತರ ಹಾಕಿರುತ್ತೇನೆ. ಸದ್ರಿ ಪ್ರತಿವಾದ ಪತ್ರವನ್ನು ತಯಾರಿಸಲು ನನ್ನ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. 1ನೇ ಪ್ರತಿವಾದಿಯು ನನಗೆ ಪರಿಚಯಸ್ಥರಾಗಿರುತ್ತಾರೆ. ಅವರು ತುಂಬ್ಲೆಕಟ್ಟಾ ಹಾಗೂ ಕಟ್‌ಬಾಗ್, ಗಜನಿ ಹಾಗೂ ಬಾಡ ಹಾಗೂ ಗುಡೇ ಅಂಗಡಿಯ ಅಧ್ಯಕ್ಷರು ಎಂದರೆ ಸರಿ. ಸಾಕ್ಷಿಯು ಮುಂದುವರಿದು ಈಗ ಅವರು ಇಲ್ಲ ಎಂದು ನುಡಿಯುತ್ತಾರೆ. ಈ ದಾವೆಯನ್ನು ದಾಖಲಿಸುವ ಸಂದರ್ಭದಲ್ಲಿ ಅವರೇ ಅಧ್ಯಕ್ಷರಾಗಿದ್ದರು ಎಂದರೆ ಸರಿ.

**ಮೂ.ದಾ.ನಂ. 38/2016**

ಪಿ.ಡಬ್ಲ್ಯು.1

ದಾವಾ ನೋಟೀಸು ಜ್ಯಾರಿಯಾದ ನಂತರದಲ್ಲಿ ನಾವು ಇಬ್ಬರು ಒಟ್ಟಿಗೆ ವಕೀಲರಿಗೆ ಮಾಹಿತಿಯನ್ನು ನೀಡಲು ಬಂದಿದ್ದೀರಾ ಎಂದರೆ ಸಾಕ್ಷಿಯು ನಾವು ಪ್ರತ್ಯೇಕವಾಗಿ ಮಾಹಿತಿಯನ್ನು ನೀಡಲು ಬಂದಿರುತ್ತೇವೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯು ಯಾವ ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಹಾಜರರಾಗಿದ್ದಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. 1ನೇ ಪ್ರತಿವಾದಿಯು ಸಲ್ಲಿಸಿದ ತಕರಾರರನ್ನು ನಾನು ಓದಿ ನೋಡಿರುವುದಿಲ್ಲ. ನಾನು ಹಾಗೂ 1ನೇ ಪ್ರತಿವಾದಿಯು ಹಾಕಿದ ಪ್ರತಿವಾದ ಪತ್ರವು ಒಂದೇ ತೇರನಾಗಿದೆ ಎಂದರೆ ಸಾಕ್ಷಿಯು ನಾನು ಈ ಬಗ್ಗೆ ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಹಾಗೂ 1ನೇ ಪ್ರತಿವಾದಿಯು ಒಂದೇ ವಕೀಲರ ಮುಖಾಂತರ ಪ್ರತಿವಾದ ಪತ್ರವನ್ನು ಒಂದೇ ತೇರವಾಗಿ ಹಾಕಿರುತ್ತೇವೆ ಎಂದರೆ ಸರಿಯಲ್ಲ.

ನಾನು ನನ್ನ ಪ್ರತಿವಾದ ಪತ್ರದಲ್ಲಿ ನಮೂದಿಸಿದಂತೆ ರಾಮಾ ಸುಬ್ರಾಯ ನಾಯ್ಕ ಇತನು 1 ಹಸಿಗಿ ಕ್ಷೇತ್ರಕೆ ಹಕ್ಕು ಕಬ್ಜಾದಾರರು ಎಂದು ಅವರು ನನಗೆ ಅವರ ಜೀವಿತಾವಧಿಯಲ್ಲಿ ತಿಳಿಸಿದಂತೆ ನಾನು ಬರೆದಿರುತ್ತೇನೆ. ದಾವಾಸ್ತಿ ರಾಮಾ ಸುಬ್ರಾಯ ನಾಯ್ಕ ವರಿಗೆ ಕುಮಟಾ ಭೂ ನ್ಯಾಯ ಮಂಡಳಿಯಿಂದ ಮಂಜೂರಾದ ಆಸ್ತಿ ಆಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಈ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅವರಿಗೆ ದಾವಾಸ್ತಿಯು ಭೂ ನ್ಯಾಯ ಮಂಡಳಿಯಿಂದ ಮಂಜೂರಾಗಿ ಪಟ್ಟಾ ನೀಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಈ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ರಾಮಾ ಸುಬ್ರಾಯ ನಾಯ್ಕ ರವರ ವಾಸ್ತವ್ಯದ ಮನೆ ಬಾಡ್ ದಲ್ಲಿ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಅವರು ನಮ್ಮ ಮನೆಯಲ್ಲಿ ಇದ್ದರು ಎಂದು ನುಡಿಯುತ್ತಾರೆ. ಅವರು ಯಾವ ಇಸ್ವಿಯಿಂದ ನಮ್ಮ ಮನೆಯಲ್ಲಿ ಇದ್ದರು ಎಂದು ನನಗೆ ತಿಳಿದಿಲ್ಲ. ಆದರೆ ಅವರು ಮರಣ

ಹೊಂದುವ ಪೂರ್ವದಲ್ಲಿ 12-13 ವರ್ಷಗಳಿಂದ ನಮ್ಮ ಮನೆಯಲ್ಲಿ ಇದ್ದರು. ನಮ್ಮ ಮನೆಗೆ ಬರುವ ಪೂರ್ವದಲ್ಲಿ ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿ ಒಂದು ಭಾಡಿಗೆ ಮನೆಯಲ್ಲಿ 6 ತಿಂಗಳುಗಳ ಕಾಲ ಇದ್ದರು.

1ನೇ ವಾದಿಯು ರಾಮಾ ಸುಬ್ರಾಯ ನಾಯ್ಕ ಇವರ ಜೊತೆ ಮದುವೆ ಆಗಿರುವ ವಿಷಯ ನನಗೆ ತಿಳಿದಿಲ್ಲ. ರಾಮಾ ಸುಬ್ರಾಯ ನಾಯ್ಕ ಇವರು 1ನೇ ವಾದಿಯ ಜೊತೆ ಮದುವೆ ಆಗಿ ಬಾಡದಲ್ಲಿ ವಾಸ್ತವ್ಯದಲ್ಲಿ ಇದ್ದರು ಎಂದರೆ ಸರಿಯಲ್ಲ. ರಾಮಾ ಸುಬ್ರಾಯ ನಾಯ್ಕ ಇವರು 1ನೇ ವಾದಿಯ ಜೊತೆ ಮದುವೆ ಆಗಿ ಬಾಡದಲ್ಲಿ ವಾಸ್ತವ್ಯದಲ್ಲಿ ಇದ್ದ ವಿಷಯ ನನಗೆ ತಿಳಿದಿದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಖ್ಯ ವಿಚಾರಣಾ ಪ್ರಮಾಣ ಪತ್ರ ಬರೆಯಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಸದ್ರಿ ಪ್ರಮಾಣ ಪತ್ರದ ಪುಟ ಸಂಖ್ಯೆ 2 ರಲ್ಲಿ ಬರೆದಿರುವ ವಾದಿಯು ದಾವಾದಲ್ಲಿ ಹೇಳಿಕೊಂಡ ರಾಮಾ ಸುಬ್ರಾಯ ನಾಯ್ಕ ........................... ಬರೆದುಕೊಟ್ಟು ವಿಚ್ಚೆ.ದನೆಯನ್ನು ಪಡೆದಿದ್ದು ಎಂಬ ವಿಚಾರವನ್ನು ರಾಮಾ ಸುಬ್ರಾಯ ನಾಯ್ಕ ಇತನು ತಿಳಿಸಿರುತ್ತಾನೆ. ಸದ್ರಿ ವಿಚ್ಚೇದನಾ ಅರ್ಜಿಯು 1ನೇ ವಾದಿಯು ಸಲ್ಲಿಸಿರುತ್ತಾರೆ ಎಂದು ರಾಮಾ ಸುಬ್ರಾಯ ನಾಯ್ಕ ಇವರು ತಿಳಿಸಿರುತ್ತಾರೆ. ಸದ್ರಿ ವಿಚ್ಚೇದನಾ ಅರ್ಜಿಯನ್ನು ರಾಮಾ ಸುಬ್ರಾಯ ನಾಯ್ಕ ಇತನು ಸಲ್ಲಿಸಿರುತ್ತಾನೆ ಎಂದರೆ ಸರಿಯಲ್ಲ. ಸದ್ರಿ ವಿಚ್ಚೇದನಾ ಅರ್ಜಿಯನ್ನು ನಾನೇ ಮುಂದಾಗಿ ಹಾಕಿಸಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ವಿಚ್ಚೇದನಾ ಅರ್ಜಿಯನ್ನು ಸಲ್ಲಿಸುವ ಸಂದರ್ಭದಲ್ಲಿ ರಾಮಾ ಸುಬ್ರಾಯ ನಾಯ್ಕ ಇತನು ಬಾಡದಲ್ಲಿ ವಾಸ್ತವ್ಯದಲ್ಲಿ ಇದ್ದನು. ನಮ್ಮ

**ಮೂ.ದಾ.ನಂ. 38/2016**

ಪಿ.ಡಬ್ಲ್ಯು.1

ಮನೆಯು ಬಾಡದ ದುಬ್ಬಣಗೇರಿಯಲ್ಲಿ ಬರುತ್ತದೆ. ನಮ್ಮ ಮನೆಯಿಂದ ರಾಮಾ ಸುಬ್ರಾಯ ನಾಯ್ಕ ಇತನು 1 ಕಿಮೀ ದೂರದಲ್ಲಿ ಇರುವ ಬಾಡಿಗೆ ಮನೆಯಲ್ಲಿ ಇದ್ದನು. ರಾಮಾ ಸುಬ್ರಾಯ ನಾಯ್ಕ ಇತನು ನನಗೆ ದಾಯಾದಿ ಸಂಬಂಧ ಇರುತ್ತಾನೆ. ಯಾವ ರೀತಿಯ ದಾಯಾದಿ ಎಂದರೆ ಸಾಕ್ಷಿಯು ನನ್ನ ಮುತ್ತಜ್ಜನ ಅಪ್ಪ ಹಾಗೂ ರಾಮಾ ಸುಬ್ರಾಯ ನಾಯ್ಕ ಇತನ ಅಪ್ಪ ಸಹೋದರರಾಗಿರುತ್ತಾರೆ. ರಾಮಾ ಸುಬ್ರಾಯ ನಾಯ್ಕ ಇತನು ನನ್ನ ದಾಯಾದಿ ಸಂಭಂಧಿ ಅಲ್ಲದೇ ಇದ್ದರೂ ಕೂಡ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ